

بِسْمِ اللهِ الرَّحْمَنِ الرَّحِيم

# ಮಸ್‌ಜಿದ್ ಮಹ್‌ಮೂದ್ – ಸ್ವೀಡನ್

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಸ್ವೀಡನಿನ **'ಮಹ್‌ಮೂದ್'** ಮಸೀದಿಯಲ್ಲಿ 13–05–2016 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಕೆಳಗಿನ ಖುರ್‌ಆನ್ ವಚನ ತಿಲಾವತ್ ಮಾಡಿದರು:*

إِنَّمَا يَعْمُرُ مَسَاجِدَ اللهِ مَنْ آمَنَ بِاللهِ وَالْيَوْمِ الآخِرِ وَأَقَامَ الصَّلاَةَ وَآتَى الزَّكَاةَ وَلَمْ يَخْشَ إِلاَّ اللهَ فَعَسَى أُوْلَئِكَ أَنْ يَكُونُوا مِنَ الْمُهْتَدِينَ

ಯಾರು ಅಲ್ಲಾಹನಲ್ಲೂ ಅಂತ್ಯ ದಿನದ ಬಗ್ಗೆಯೂ ವಿಶ್ವಾಸವಿಡುತ್ತಾರೋ ನಮಾಝನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೋ ಝಕಾತ್ ನೀಡುತ್ತಾರೋ ಅಲ್ಲಾಹನಿಗೆ ಹೊರತು ಬೇರೆ ಯಾರಿಗೂ ಭಯಪಡುವುದಿಲ್ಲವೋ ಅವರು ಮಾತ್ರ ಅಲ್ಲಾಹನ ಮಸ್‌ಜಿದ್‌ಗಳನ್ನು ಪರಿಪಾಲಿಸುವ ಹಕ್ಕುದಾರರು; ಅಂಥವರೇ ಮಾರ್ಗದರ್ಶನ ಹೊಂದಬಲ್ಲರು. (ಪವಿತ್ರ ಖುರ್‌ಆನ್ 9:18)

الَّذِينَ إِنْ مَكَّنَّاهُمْ فِي الأَرْضِ أَقَامُوا الصَّلاَةَ وَآتَوُا الزَّكَاةَ وَأَمَرُوا بِالْمَعْرُوفِ وَنَهَوْا عَنِ الْمُنْكَرِ وَلِلَّهِ عَاقِبَةُ الأُمُورِ

ಭೂಮಿಯಲ್ಲಿ ನಾವು ಅವರನ್ನು ನೆಲೆಗೊಳಿಸಿದರೆ ಅವರು ನಮಾಝನ್ನು ನಿಷ್ಠೆಯಿಂದ ನಿರ್ವಹಿಸುವರು, ಝಕಾತ್ ನೀಡುವರು, ಒಳಿತನ್ನು ಉಪದೇಶಿಸುವರು ಮತ್ತು ಕೆಡುಕನ್ನು ತಡೆಯುವರು. ಎಲ್ಲ ಕಾರ್ಯಗಳ ಅಂತ್ಯಪರಿಣಾಮ ಅಲ್ಲಾಹನ ಕೈಯಲ್ಲಿದೆ. (22:42).

ಅಲ್‌ಹಮ್ದುಲಿಲ್ಲಾಹ್, ಸ್ವೀಡನಿನ ಅಹ್ಮದಿಯಾ ಜಮಾಅತ್‌ಗೆ ದ್ವಿತೀಯ ಮಸ್‌ಜಿದ್ ನಿರ್ಮಿಸುವ ಭಾಗ್ಯ ಅಲ್ಲಾಹನು ದಯಪಾಲಿಸಿರುವನು. ಅದರ ಹೆಸರು ಮಸ್‌ಜಿದ್ **ಮಹ್‌ಮೂದ್** ಎಂದು ಇರಿಸಲಾಗಿದೆ. ಎಲ್ಲ ಪುರುಷರೂ ಮಹಿಳೆಯರೂ ಈ ಮಸ್‌ಜಿದ್ ನಿರ್ಮಾಣದಲ್ಲಿ ಬಹಳ ನಿಷ್ಠೆಯಿಂದ ವರ್ತಿಸಿದ್ದಾರೆ. ಇಲ್ಲಿನ ಜಮಾಅತ್ ಚಿಕ್ಕದಾಗಿದ್ದರೂ ಇದೊಂದು ದೊಡ್ಡ ಯೋಜನೆಯಾಗಿತ್ತು. ಈ ಕಾರಣದಿಂದ ಅವರಿಗೆ ಇದೊಂದು ದೊಡ್ಡ ಯೋಜನೆಯೇ ಆಗಿತ್ತು. ಸಂಪಾದಿಸುವವರು ಬಹಳ ಹೆಚ್ಚು ತ್ಯಾಗಗಳನ್ನು ಮಾಡಿದರು ಮತ್ತು ತಮ್ಮ ಶಕ್ತಿಯನುಸಾರ ಆರ್ಥಿಕ ತ್ಯಾಗ ಮಾಡಿದರು. ಮಹಿಳೆಯರು ಮತ್ತು ಮಕ್ಕಳು ಸಹ ಹಿಂದೆ ಸರಿಯಲಿಲ್ಲ. ಅವರು ಅಲ್ಲಾಹನ ಭವನವನ್ನು ನಿರ್ಮಿಸಲು ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಉದಾಹರಣೆ ತೋರಿಸಿದರು. ಅಹ್ಮದಿಯರು ಮಾಡುವ ಧನ ತ್ಯಾಗಗಳನ್ನು ನೋಡಿ ಜನರು ಆಶ್ಚರ್ಯಗೊಳ್ಳುತ್ತಾರೆ. ಕೇವಲ ಒಂದು ಮಸ್‌ಜಿದ್ ನಿರ್ಮಾಣದ ಪ್ರಶ್ನೆಯಲ್ಲ. ಮಸ್‌ಜಿದ್‌ಗಳ ನಿರ್ಮಾಣ, ನಮಾಝ್ ಸೆಂಟರ್‌ಗಳ ಸ್ಥಳ ಖರೀದಿ ಮತ್ತು ನಿರ್ಮಾಣ, ಮಿಶನ್ ಹೌಸ್‌ಗಳ ನಿರ್ಮಾಣಕ್ಕೆ ಸ್ಥಳ ಖರೀದಿ ಮತ್ತು ನಿರ್ಮಾಣ, ಈ ಯೋಜನೆಗಳು ನಿರಂತರ ಜಾರಿಯಲ್ಲಿವೆ. ಇವುಗಳಲ್ಲದೆ ಬೇರೆ ಅಸಂಖ್ಯಾತ ಖರ್ಚುಗಳಿವೆ. ಲೋಕದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಈ ಕೆಲಸಗಳು ನಿರಂತರವಾಗಿ ಜಾರಿಯಲ್ಲಿವೆ. ಅದರೊಂದಿಗೆ ಬೇರೆ ಚಂದಗಳನ್ನು ಸಹ ನೀಡಲಾಗುತ್ತಿವೆ. ಅಹ್ಮದಿಯಾ ಜಮಾಅತ್‌ನಲ್ಲಿ ಬಹಳ ಜನರು ಹೇಗಿದ್ದಾರೆಂದರೆ ಸಾಂಪತ್ತಿಕ ಬಲಿದಾನ ನೀಡಲು ಅವರು ಅಲ್ಲಾಹನ ಅನುಗ್ರಹದಿಂದ ಉತ್ಸಾಹ ಭರಿತರಾಗಿರುತ್ತಾರೆ. ಜಮಾಅತ್‌ಗೋಸ್ಕರ ಮತ್ತು ಅಲ್ಲಾಹನಿಗೋಸ್ಕರ ಖರ್ಚು ಮಾಡುವ ಈ ಇಸ್ಲಾಮೀ ಆತ್ಮವನ್ನು ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧ ಗುಲಾಮರಾದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮೊಳಗೆ ಊದಿದರು. ಅಹ್ಮದಿಯಾ ಜಮಾಅತಿನ ಜನರು ಮಾಡುವ ಸಾಂಪತ್ತಿಕ ಬಲಿದಾನದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಶ್ಚರ್ಯ ಚಕಿತರಾಗುತ್ತಿದ್ದರು. ಅದೇ ರೀತಿಯಲ್ಲಿ ಇಂದು ಸಹ ಅವರು ಮಾಡುವ ಸಾಂಪತ್ತಿಕ ಬಲಿದಾನ, ನಾನು ಹಿಂದೆ ಹೇಳಿದ ಹಾಗೆ ಆಶ್ಚರ್ಯಕರವಾಗಿದೆ. ಇವೆಲ್ಲ ಅಲ್ಲಾಹನ ಅನುಗ್ರಹಗಳಾಗಿವೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾಡಿದ ವಾಗ್ದಾನಗಳ ಈಡೇರಿಕೆಯಾಗಿವೆ. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆವಶ್ಯಕತೆಗಳನ್ನು ಈಡೇರಿಸುತ್ತಾ ಇರುವುದಾಗಿ ವಾಗ್ದಾನ ಮಾಡಿದ್ದನು. ಅಹ್ಮದಿಯಾ ಜಮಾಅತಿನ ಬಹುತೇಕ ಯೋಜನೆಗಳಲ್ಲಿ ಹೆಚ್ಚಿನ ಕೆಲಸಗಳು ಸ್ವಯಂಸೇವೆ ಮೂಲಕ ಸಹ ನಡೆಸಲ್ಪಡುತ್ತವೆ. ಆ ಮೂಲಕ ಖರ್ಚಿನಲ್ಲಿ ಸ್ವಲ್ಪಮಟ್ಟಿಗೆ ಉಳಿತಾಯವಾಗುತ್ತವೆ. ಅಲ್ಲಾಹನು ಈ ಮಸ್‌ಜಿದ್ ನಿರ್ಮಾಣಕ್ಕೆ ಆರ್ಥಿಕ ಸಹಾಯ ನೀಡಿದವರಿಗೆ ಮತ್ತು ಈ ಮಸ್‌ಜಿದ್ ಸಂಕೀರ್ಣದ ನಿರ್ಮಾಣದಲ್ಲಿ ಯಾವುದಾದರೂ ರೀತಿಯಲ್ಲಿ ಭಾಗವಹಿಸಿದವರಿಗೆ ಅಲ್ಲಾಹನು ಅತ್ಯುತ್ತಮ ಪ್ರತಿಫಲ ದಯಪಾಲಿಸಲಿ. ಬಹಳ ಸುಂದರವಾದ ಮಸ್‌ಜಿದ್ ನಿರ್ಮಿಸಲ್ಪಟ್ಟಿದೆ. ಈ ಪ್ರದೇಶದ ಜನರು ಸಹ ಈ ಮಸ್‌ಜಿದ್‌ನ ಸೌಂದರ್ಯವನ್ನು ಹೊಗಳುತ್ತಿದ್ದಾರೆ.

ಸಾಂಪತ್ತಿಕ ತ್ಯಾಗವನ್ನು ಮಕ್ಕಳು ಮತ್ತು ದೊಡ್ಡವರು ಯಾವ ರೀತಿ ಮಾಡಿದರು ಎಂಬುದರ ಬಗ್ಗೆ ಕೆಲವು ಉದಾಹರಣೆಗಳನ್ನು ನೀಡುತ್ತೇನೆ. ಹನ್ನೊಂದು ವರ್ಷ ಪ್ರಾಯದ ಒಬ್ಬ ಬಾಲಕಿ ಕೆಲವು ನೂರು ಕ್ರೋನರ್ ಹಣವನ್ನು ನೀಡುತ್ತಾ ಹೇಳಿದಳು: ನನಗೆ ಪಾಕೆಟ್ ಮನಿಯಾಗಿ ಲಭಿಸಿದ ಹಣವನ್ನು ದೀರ್ಘಕಾಲದಿಂದ ಜಮಾಯಿಸುತ್ತಿದ್ದೆ. ಅದನ್ನು ಮಸ್‌ಜಿದ್ ನಿರ್ಮಾಣಕ್ಕೆ ಕೊಡುತ್ತಿದ್ದೇನೆ. ಹತ್ತು ಹನ್ನೊಂದು ವರ್ಷ ಪ್ರಾಯದ ಇನ್ನೊಬ್ಬ ಬಾಲಿಕೆ ಅಮೀರ್ ಸಾಹೇಬರ ಬಳಿಗೆ ಬಂದು ಹೇಳಿದಳು: ನಾನು ಐನೂರು ಕ್ರೋನರ್ ಮಸ್‌ಜಿದ್ ನಿರ್ಮಾಣಕ್ಕೆ ನೀಡುತ್ತೇನೆ. ಅವಳು ಎರಡು ಗಿಳಿಗಳನ್ನು ಸಾಕುತ್ತಿದ್ದಳು. ಅವುಗಳನ್ನು ಮಾರಾಟ ಮಾಡಿ ಈ ಹಣವನ್ನು ಗಳಿಸಿರುವುದಾಗಿ ಹೇಳಿದಳು. ಇಲ್ಲಿನ ದೇಶಗಳಲ್ಲಿ ಸಾಕು ಮೃಗಗಳನ್ನು ಹೊಂದುವ ಬಹಳ ಅಭಿರುಚಿ ಇರುತ್ತದೆ. ಆದರೆ ಅಹ್ಮದಿ ಬಾಲಿಕೆ ಇಲ್ಲಿನ ಮಕ್ಕಳ ಹಾಗೆ ಸಾಕು ಪ್ರಾಣಿಗೆ ಆದ್ಯತೆ ನೀಡದೆ ತನ್ನ ಇಚ್ಛೆ ಪ್ರಕಾರ ಅಲ್ಲಾಹನ ಭವನ ನಿರ್ಮಾಣಕ್ಕೆ ಆದ್ಯತೆ ನೀಡಿದಳು. ವಾಸ್ತವದಲ್ಲಿ ಇರಬೇಕಾದ ಉತ್ಸಾಹ ಅಲ್ಲಾಹನ ಸಂಪ್ರೀತಿ ಗಳಿಸುವ ಬಗ್ಗೆಯಾಗಿದೆ. ಅದರ ಬಗ್ಗೆ ಅಹ್ಮದೀ ಮಕ್ಕಳೇ ಮನವರಿಕೆ ಮಾಡಿಕೊಳ್ಳ ಬಲ್ಲರು. ಮಸ್‌ಜಿದ್ ನಿರ್ಮಿಸುವವರು ಸ್ವರ್ಗದಲ್ಲಿ ತಮ್ಮ ಮನೆ ನಿರ್ಮಿಸುತ್ತಾರೆ ಎಂಬ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಡಿಮುತ್ತು ಬಗ್ಗೆ ಅರಿವು ಅಹ್ಮದಿ ಮಕ್ಕಳು ಬಾಲ್ಯದಲ್ಲಿಯೇ ಗಳಿಸಿರುತ್ತಾರೆ. ಒಬ್ಬ ಬಾಲಿಕೆ **ಇಅ್‌ತಿಕಾಫ್** ಅನುಷ್ಠಿಸಲು ಮಸ್‌ಜಿದ್‌ನಲ್ಲಿದ್ದಳು. ಆಕೆ ಇಲ್ಲಿ ಜಮಾಅತ್ ಹುದ್ದೇದಾರರೊಂದಿಗೆ

ತನ್ನ ಆಭರಣಗಳನ್ನು ಮಸ್‌ಜಿದ್ ನಿರ್ಮಾಣಕ್ಕೆ ಅರ್ಪಿಸುವುದಾಗಿ ಹೇಳಿದಳು. **ವಕ್ಫೇ ನೌ** ಗೆ ಸೇರಿದ ಒಬ್ಬ ಬಾಲಿಕೆ ತನ್ನ ಎಲ್ಲ ಆಭರಣಗಳನ್ನು ಮತ್ತು ಆಕೆ ಜಮಾಯಿಸಿದ ಪಾಕೆಟ್ ಮನಿಯ ಎಲ್ಲ ಹಣವನ್ನು ಒಂದು ಲಕೋಟೆಯಲ್ಲಿ ಹಾಕಿ ಒಂದು ಪತ್ರ ಬರೆದು ತನ್ನ ತಂದೆಯವರ ತಲೆದಿಂಬಿನ ಕೆಳಗೆ ಇರಿಸಿ ಮಸ್‌ಜಿದ್ ನಿರ್ಮಾಣಕ್ಕೆ ನೀಡಲು ನನ್ನ ಬಳಿ ಇರುವುದು ಇಷ್ಟೇ ಎಂದು ಸೂಚಿಸಿದಳು. ಕೆಲವು ಯುವತಿಯರು ಇತೀಚೆಗೆ ವಿವಾಹಿತೆಯರಾಗಿದ್ದರು. ಅವರು ಆಭರಣಗಳ ಬಗ್ಗೆ ಇರುವ ತಮ್ಮ ಆಶೆಗಳನ್ನು ಈಡೇರಿಸಿರಲಿಲ್ಲ. ಅವರು ತಮ್ಮ ಎಲ್ಲ ಆಭರಣಗಳನ್ನು ಮಸ್‌ಜಿದ್ ನಿರ್ಮಾಣಕ್ಕೆ ಅರ್ಪಿಸಿದರು. ಕೆಲವು ಮಹಿಳೆಯರ ಪತಿಯಂದಿರು ಉತ್ತಮ ವಾಗ್ದಾನ ಮಾಡಿ ಅದನ್ನು ಪಾವತಿ ಸಹ ಮಾಡಿದ್ದರು. ಅಂತಹ ಮಹಿಳೆಯರು ಸಹ ತಮ್ಮ ಆಭರಣಗಳನ್ನು ಮತ್ತು ಉಳಿತಾಯ ಮಾಡಿದ ಹಣವನ್ನು ಮಸ್‌ಜಿದ್ ನಿರ್ಮಾಣಕ್ಕೆ ನೀಡಿದರು. ಇಬ್ಬರು ಮಹಿಳೆಯರು, ಅವರಿಗೆ ಸಾಂಪತ್ತಿಕ ಬಲಿದಾನ ನೀಡುವ ಶಕ್ತಿ ಇರಲಿಲ್ಲ, ಅವರ ಬಳಿ ಏನೂ ಇರಲಿಲ್ಲ, ಆದರೆ ಅವರಿಗೆ ಅವರ ತಂದೆಯವರಿಂದ ವಾರೀಸುದಾರಿಕೆಯಲ್ಲಿ ಪಾಕಿಸ್ತಾನದಲ್ಲಿ ಮನೆ ದೊರಕಿತ್ತು. ಅವರು ಆ ಮನೆಯನ್ನು ಮಾರಾಟಮಾಡಿ ಪೂರ್ಣ ಹಣವನ್ನು ಮಸ್‌ಜಿದ್ ನಿರ್ಮಾಣಕ್ಕೆ ನೀಡಿದರು. ಒಬ್ಬ ಯುವಕ ಮಸ್‌ಜಿದ್ ನಿರ್ಮಾಣಕ್ಕೆ ದೊಡ್ಡ ಸಂಖ್ಯೆಯ ಹಣ ವಾಗ್ದಾನ ಮಾಡಿದ್ದರು. ಅದರ ಒಂದು ದೊಡ್ಡ ಭಾಗ ಅವರ ಪತ್ನಿಯ ಹೆಸರಲ್ಲಿ ವಾಗ್ದಾನ ಮಾಡಲಾಗಿತ್ತು. ದುರದೃಷ್ಟವಶಾತ್ ಈ ಜೋಡಿಯ ವಿವಾಹ ಸಂಬಂಧ ಬೇರ್ಪಟ್ಟಿತು. ಆದರೆ ಆ ಯುವಕ ಹೇಳಿದರು: ನನ್ನ ಪತ್ನಿಯ ಪರವಾಗಿ ನಾನು ವಾಗ್ದಾನ ಮಾಡಿದ್ದೆ. ನನ್ನ ಪತ್ನಿ ನನ್ನಿಂದ ಬೇರ್ಪಟ್ಟಿದ್ದರೂ ನಾನೇ ಆ ವಾಗ್ದಾನ ಈಡೇರಿಸುವೆನು ಎಂದು ಹೇಳಿ ಆ ಹಣ ಪೂರ್ಣವಾಗಿ ಪಾವತಿಸಿದರು. ತಾತ್ಕಾಲಿಕ ನೌಕರಿ ಮಾಡುತ್ತಿದ್ದ ಓರ್ವ ವ್ಯಕ್ತಿ ಮಸ್‌ಜಿದ್ ನಿರ್ಮಾಣದ ಚಂದ ವರ್ಧಿಸಲು ಅಪೇಕ್ಷಿಸಿದಾಗ ಅವರು ಚಂದವನ್ನು ಹತ್ತು ಸಾವಿರ ಕ್ರೋನರ್‌ನಿಂದ ವರ್ಧಿಸಿ ಒಂದು ಲಕ್ಷ ಕ್ರೋನರ್ ಆಗಿ ಮಾಡಿದರು. ಅವರ ತ್ಯಾಗದ ಫಲವಾಗಿ ಅಲ್ಲಾಹನು ಅವರಿಗೆ ಸ್ಥಿರ ನೌಕರಿ ದಯಪಾಲಿಸಿದನು. ಮೊದಲಿಗಿಂತ ಉತ್ತಮವಾದ ವಾಹನ ಖರೀದಿ ಮಾಡುವ ಭಾಗ್ಯ ಅವರಿಗೆ ಅಲ್ಲಾಹನು ನೀಡಿದನು. ಇಂತಹ ತ್ಯಾಗದ ಮನೋಭಾವ ಅನೇಕ ಅಹ್ಮದಿಯರಲ್ಲಿ ಪ್ರತಿಯೊಂದು ಸ್ಥಳದಲ್ಲಿ ಕಾಣಿಸುತ್ತದೆ.

ಈ ಮಸ್‌ಜಿದಿನ ನಿರ್ಮಾಣ ಮತ್ತು ಅದರಲ್ಲಿರುವ ಸ್ಥಳವಕಾಶದ ಬಗ್ಗೆ ಸಹ ಸಂಕ್ಷಿಪ್ತವಾಗಿ ವಿವರಿಸುವೆನು. 1999ರಲ್ಲಿ ಈ ಮಸ್‌ಜಿದ್ ನಿರ್ಮಾಣದ ಯೋಜನೆಯ ಆರಂಭವಾಯಿತು. ಮುಕರ್ರಮ್ ಇಹ್‌ಸಾನುಲ್ಲಾ ಸಾಹೇಬರು ಐದು ಸಾವಿರ ಚದರ ಮೀಟರ್ ವಿಸ್ತೀರ್ಣದ ಸ್ಥಳವನ್ನು ಖರೀದಿಸಿ ಜಮಾಅತಿಗೆ ನೀಡಿದರು. ಈ ಸ್ಥಳ ಒಂದು ಎತ್ತರದ ಸ್ಥಳವಾಗಿದ್ದು ಮಸ್‌ಜಿದ್ ಎದ್ದು ಕಾಣುವ ರೀತಿಯಲ್ಲಿದೆ. ಮುಖ್ಯ ಹೈವೇ ಇಲ್ಲಿಗೆ ಸಮೀಪ ದಾಟಿ ಹೋಗುತ್ತಿದೆ. ದೂರದಿಂದಲೇ ಈ ಮಸ್‌ಜಿದ್‌ನ ಎತ್ತರವಾದ ಸುಂದರ ಕಟ್ಟಡ ಕಾಣಿಸಲು ತೊಡಗುತ್ತದೆ ಮತ್ತು ಏಕದೇವ ವಿಶ್ವಾಸದ (ತೌಹೀದಿನ) ಸಂದೇಶ ನೀಡುತ್ತದೆ. ಈ ಹೈವೇ ನಾರ್ವೇ ಮತ್ತು ಸ್ವೀಡನ್ ದೇಶಗಳನ್ನು ಯುರೋಪಿನ ಇತರ ನಗರಗಳೊಂದಿಗೆ ಜೋಡಿಸುತ್ತಿವೆ. ಇದೇ ರೀತಿ ಸ್ವೀಡನ್ ಮತ್ತು ನಾರ್ವೇ ದೇಶಗಳ ಎಲ್ಲ ದೊಡ್ಡ ನಗರಗಳನ್ನು ಈ ಹೈವೇ ಜೋಡಿಸುತ್ತಿದೆ.

ಪ್ರತಿಯೊಬ್ಬ ಅಹ್ಮದಿ ಈ ನಿರ್ಮಾಣಕ್ಕೆ ಸಂಬಂಧಿಸಿದ ತನ್ನ ಹೊಣೆಗಾರಿಕೆಗಳನ್ನು ಈಡೇರಿಸುವಂತೆ ಅಲ್ಲಾಹನು ಮಾಡಲಿ. ತಬ್ಲೀಗ್ ಮಾಡುವ ಮತ್ತು ಏಕದೇವ ವಿಶ್ವಾಸ ಹರಡುವ ಮಾರ್ಗವಾಗಿ ಈ ಮಸ್‌ಜಿದ್ ಶಾಶ್ವತವಾಗಿರಲಿ. ಈ ಮಸ್‌ಜಿದಿನ ವಾಸ್ತವಿಕ ಸೌಂದರ್ಯ ಧಾರ್ಮಿಕ ಉಪದೇಶದ ಸೌಂದರ್ಯವಾಗಿದೆ. ಯಾವ ಉದ್ದೇಶಕ್ಕೋಸ್ಕರ ಈ ಮಸ್‌ಜಿದ್ ನಿರ್ಮಿಸಲಾಗಿದೆಯೋ ಅದು ಪ್ರಕಾಶಮಾನವಾಗಿ ಬೆಳಗುವಂತಾಗಲಿ.

ಈ ಮಸ್‌ಜಿದ್ ಸಂಕೀರ್ಣದ ಒಟ್ಟು ವಿಸ್ತೀರ್ಣ 2353 ಚದರ ಮೀಟರ್ ಆಗಿದೆ. ಇದರಲ್ಲಿ ಐದು ಕಟ್ಟಡಗಳಿವೆ. ಮುಖ್ಯ ಕಟ್ಟಡವಾದ ಮಸ್‌ಜಿದ್ ಮಹ್‌ಮೂದ್‌ನ ವಿಸ್ತೀರ್ಣ 1494 ಚದರ ಮೀಟರ್ ಅಥವಾ ಅಂದಾಜು ಸಾವಿರದ ಐನೂರು ಚದರ ಮೀಟರ್ ಆಗಿದೆ. ಸ್ಪೋರ್ಟ್ಸ್ ಹಾಲ್ 750 ಚದರ ಮೀಟರ್ ವಿಸ್ತೀರ್ಣ ಇದೆ. ಇದಲ್ಲದೆ ಬೇರೆ ಕಟ್ಟಡಗಳೂ ಇವೆ. ಮಸ್‌ಜಿದ್ ಎರಡು ಹಾಲ್‌ಗಳನ್ನು ಹೊಂದಿದೆ. ಒಂದು ಕೆಳಗೆ ಇನ್ನೊಂದು ಮೇಲ್ಭಾಗದಲ್ಲಿ. ಇವು ಪುರುಷರಿಗೆ ಮತ್ತು ಮಹಿಳೆಯರಿಗಾಗಿವೆ. ಅಲ್ಲಾಹನ ಅನುಗ್ರಹದಿಂದ ಹದಿನೇಳು ನೂರು ಜನರು ಒಟ್ಟಿಗೆ ನಮಾಝ್ ಮಾಡಬಹುದಾಗಿದೆ. ಮಸ್‌ಜಿದ್‌ಗೆ ಸಂಬಂಧಿಸಿದ ಹಕ್ಕು ಈಡೇರುವುದು ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಜನರು ಆರಾಧನೆಗೆ ಆಗಮಿಸುವಾಗ ಆಗಿರುತ್ತದೆ. ನೀವು ಸ್ವತಃ ಮಸ್‌ಜಿದ್‌ಗೆ ನಮಾಝ್‌ಗೋಸ್ಕರ ಬರಬೇಕು ಮತ್ತು ತಬ್ಲೀಗ್ ಮಾಡಿ ಇಲ್ಲಿನ ಜನರಿಗೆ ಇಸ್ಲಾಮಿನ ತತ್ವಗಳನ್ನು ಪರಿಚಯ ಮಾಡಿಸಿ ಕೊಡಬೇಕು. ಇದರ ಬಗ್ಗೆ ಒಂದು ಸ್ಥಳದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಗಮನ ಸೆಳೆದಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈಗ ನಮ್ಮ ಜಮಾಅತ್‌ಗೆ ಮಸ್‌ಜಿದ್‌ಗಳ ಬಹಳ ಆವಶ್ಯಕತೆ ಇದೆ. ಇದು ದೇವ ಭವನವಾಗಿರುತ್ತದೆ. ಯಾವ ಗ್ರಾಮ ಅಥವಾ ನಗರದಲ್ಲಿ ನಮ್ಮ ಮಸ್‌ಜಿದ್ ಸ್ಥಾಪಿಸಲ್ಪಟ್ಟರೆ ತಿಳಿದುಕೊಳ್ಳಿರಿ ನಮ್ಮ ಜಮಾಅತಿನ ಅಭಿವೃದ್ಧಿಯ ಅಸ್ತಿಭಾರ ಹಾಕಲಾಗಿದೆ ಎಂದು. ಯಾವುದಾದರೂ ಗ್ರಾಮ ಅಥವಾ ನಗರದಲ್ಲಿ ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿದ್ದರೆ ಅಥವಾ ತೀರಾ ಇಲ್ಲದಿದ್ದರೆ ಅಲ್ಲಿ ಇಸ್ಲಾಮ್ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿ ಒಂದು ಮಸ್‌ಜಿದ್ ನಿರ್ಮಿಸಬೇಕು. ಆಗ ಅಲ್ಲಾಹನು ಸ್ವತಃ ಮುಸ್ಲಿಮರನ್ನು ಅಲ್ಲಿಗೆ ಸೆಳೆಯುವನು. ಎಂದರೆ ಹೊರಗಿನಿಂದ ಮುಸ್ಲಿಮರು ಅಲ್ಲಿಗೆ ಆಗಮಿಸುವರು ಮತ್ತು ಸ್ಥಳೀಯ ಜನರಿಂದಲೂ ಮುಸ್ಲಿಮರ ಸಂಖ್ಯೆ ವರ್ಧಿಸುವುದು. ಆದರೆ ಶರತ್ತೇನೆಂದರೆ ಮಸ್‌ಜಿದ್ ನಿರ್ಮಾಣದಲ್ಲಿ ನಿಷ್ಠಾವಂತ ಸಂಕಲ್ಪವಿರಬೇಕು ಮತ್ತು ಕೇವಲ ಅಲ್ಲಾಹನಿಗೋಸ್ಕರವಾಗಿ ನಿರ್ಮಿಸಲ್ಪಟ್ಟದ್ದಾಗಬೇಕು. ಸ್ವಾರ್ಥ ಆಸಕ್ತಿ ಮತ್ತು ಯಾವುದೇ ಕೆಟ್ಟ ವಿಚಾರವಿರಬಾರದು. ಅಂತಹ ಸ್ಥಿತಿಯಲ್ಲಿ ಅಲ್ಲಾಹನು ಅನುಗ್ರಹ ನೀಡುವನು.

ಆದುದರಿಂದ ಈ ಶರತ್ತನ್ನು ನಾವು ಯಾವಾಗಲೂ ನೆನಪಿನಲ್ಲಿಡಬೇಕು. ಪೂರ್ಣ ನಿಷ್ಠೆ ಇರಬೇಕು. ಯಾವುದೇ ರೀತಿಯ ಕೆಟ್ಟ ಭಾವನೆ ಮತ್ತು ಪಿತೂರಿ ಹೃದಯದಲ್ಲಿರಬಾರದು. ಅಲ್ಲಾಹನ ಸಂಪ್ರೀತಿ ಗಳಿಸಲು ತ್ಯಾಗಗಳನ್ನು ಮಾಡುವ ಉದ್ದೇಶ ಮಾತ್ರ ಮನಸ್ಸಿನಲ್ಲಿರಬೇಕು. ಮಸ್‌ಜಿದ್ ನಿರ್ಮಿಸಿ ಅದನ್ನು ಜನಭರಿತವನ್ನಾಗಿ ಮಾಡಿದರೆ ಅಸಂಖ್ಯಾತ ಅನುಗ್ರಹ ಲಭಿಸುತ್ತವೆ. ಪರಸ್ಪರ ಐಕ್ಯ ಹೊಂದಬೇಕು. ಅದಕ್ಕೋಸ್ಕರ ಅಲ್ಲಾಹನು ತೋರಿಸಿದ ರೀತಿಗಳನ್ನು ಅನುಸರಿಸಬೇಕು.

ಇದಕ್ಕೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಾಝ್ ಮತ್ತು ಮಸ್‌ಜಿದ್‌ಗಳಿಗೆ ಸಂಬಂಧಿಸಿ ನಮಗೆ ಉಪದೇಶಿಸಿದುದನ್ನು ನಾನು ನಿಮ್ಮ ಮುಂದೆ ಇರಿಸುತ್ತೇನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಾಮೂಹಿಕ ನಮಾಝ್‌ನಲ್ಲಿ ಅನುಗ್ರಹವಿರಿಸಿದ ಕಾರಣವೇನೆಂದರೆ ಅದರಲ್ಲಿ ಏಕತೆ ಉಂಟಾಗುತ್ತದೆ. ಈ ಏಕತೆ ಕೃತಿ ರೂಪದಲ್ಲಿ ತರಲು ಹೀಗೆ ಮಾರ್ಗದರ್ಶನ ನೀಡಲಾಗಿದೆ: ನಮಾಝ್‌ಗೆ ಸಾಲಾಗಿ ನಿಲ್ಲುವಾಗ ನಮ್ಮ ಹಿಮ್ಮಡಿಗಳು ಒಂದು ನೇರವಾದ ಗೆರೆಯಲ್ಲಿರಬೇಕು. ಸಾಲು ನೇರವಾಗಿರಬೇಕು. ಒಬ್ಬರಿನ್ನೊಬ್ಬರಿಗೆ ತಾಗಿ ಕೊಂಡಿರಬೇಕು. ಇದರ ಉದ್ದೇಶವೇನೆಂದರೆ ಎಲ್ಲರೂ ಒಟ್ಟಿಗೆ ಸೇರಿ ಒಂದು ಶರೀರದ ಹಾಗಿರಬೇಕು ಎಂದಾಗಿದೆ. ಒಬ್ಬನ ಪ್ರಕಾಶ ಇನ್ನೊಬ್ಬರಿಗೆ ಹರಿಯುವ ಹಾಗಿರಬೇಕು. ಕೆಲವರಲ್ಲಿ ಹೆಚ್ಚು ಆಧ್ಯಾತ್ಮಿಕ ಶಕ್ತಿ ಇರುತ್ತದೆ. ಕೆಲವರಲ್ಲಿ ಅದು ಕಡಿಮೆ ಇರುತ್ತದೆ. ಆಧ್ಯಾತ್ಮಿಕತೆಯ ಪ್ರಕಾಶ ಒಬ್ಬರಿಂದಿನ್ನೊಬ್ಬರಿಗೆ ಹರಿಯಬೇಕೆಂಬುದು ಇದರ ಉದ್ದೇಶವಾಗಿದೆ. ಸ್ವಾರ್ಥಭಾವನೆ ಇಲ್ಲದಾಗಬೇಕು.

ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಶೆಯಾಗಿತ್ತು. ಸ್ವಾರ್ಥತೆ ಸಂಪೂರ್ಣವಾಗಿ ನಿವಾರಣೆ ಆಗಬೇಕು ಮತ್ತು ಎಲ್ಲರೂ ಒಂದಾಗಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನಿಗೆ ಅನ್ಯರಿಂದ ಪ್ರಕಾಶವನ್ನು ಹೀರುವ ಶಕ್ತಿ ಇದೆ. ಇದಕ್ಕೋಸ್ಕರ ಆಜ್ಞೆ ಹೀಗೆ ನೀಡಲಾಗಿದೆ– ಪ್ರತಿ ಬಡಾವಣೆಯ ಮಸ್‌ಜಿದ್‌ನಲ್ಲಿ ಪ್ರತಿ ದಿನ, ನಗರದ ಮಸ್‌ಜಿದ್‌ನಲ್ಲಿ ವಾರಕ್ಕೊಮ್ಮೆ, ಮತ್ತು ವರ್ಷಕ್ಕೆರಡು ಸಾರಿ ಈದ್‌ಗಾಹ್‌ಗಳಲ್ಲಿ ಜಮಾಯಿಸಿ ನಮಾಝ್ ಮಾಡಬೇಕೆಂದು ಆದೇಶಿಸಲಾಗಿದೆ. ಲೋಕದ ಎಲ್ಲ ಮುಸ್ಲಿಮರು ವರ್ಷದಲ್ಲಿ ಒಮ್ಮೆ ಕಅಬದ ಸ್ಥಳದಲ್ಲಿ ಜಮಾಯಿಸಿ ನಮಾಝ್ ಮಾಡಬೇಕು. ಈ ಎಲ್ಲ ಆಜ್ಞೆಗಳ ಉದ್ದೇಶ ಐಕ್ಯತೆಯಾಗಿದೆ. ನಮಾಝಿನಿಂದ ಮೊದಲುಗೊಂಡು ಹಜ್ಜ್ ತನಕ ಆರಾಧನೆ ಮಾಡಲು ನೀಡಿದ ಆಜ್ಞೆಗಳ ಉದ್ದೇಶ ಮುಸ್ಲಿಮರು ಏಕ ಸಮುದಾಯವಾಗಬೇಕು ಎಂಬುದಾಗಿದೆ.

ಆದರೆ ದುರದೃಷ್ಟವಶಾತ್ ಈಗ ಎಲ್ಲರಿಗಿಂತ ಹೆಚ್ಚು ಭಿನ್ನತೆ ಮತ್ತು ಒಡಕು ಮುಸ್ಲಿಮರಲ್ಲಿದೆ. ಅಹ್ಮದಿಯರಾದ ನಾವು ಐಕ್ಯತೆಯ ಉದಾಹರಣೆ ಸ್ಥಾಪಿಸಬೇಕಾಗಿದೆ ಮತ್ತು ಲೋಕಕ್ಕೆ ಇಸ್ಲಾಮಿನ ವಾಸ್ತವಿಕ ಮತ್ತು ಸುಂದರ ಉಪದೇಶಗಳ ಬಗ್ಗೆ ತಿಳುವಳಿಕೆ ನೀಡಬೇಕಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮಸ್‌ಜಿದ್‌ಗಳ ವಾಸ್ತವಿಕ ಸೌಂದರ್ಯ ಕಟ್ಟಡಗಳಲ್ಲಿಲ್ಲ. ನಿಷ್ಠೆಯಿಂದ ನಮಾಝ್ ಮಾಡುವ ಜನರಲ್ಲಿ ಅದು ಇದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಸ್‌ಜಿದ್ ಚಿಕ್ಕದಾಗಿತ್ತು. ಖರ್ಜೂರದ ಮರದ ಸೋಗೆಯಿಂದ ಅದರ ಮಾಡು ನಿರ್ಮಿಸಲಾಗಿತ್ತು. ಮಳೆ ಬರುವಾಗ ಮಳೆ ನೀರು ಸೋರುತ್ತಿತ್ತು. ಮಸ್‌ಜಿದ್‌ನ ಸೌಂದರ್ಯ ಅದರಲ್ಲಿ ನಮಾಝ್ ಮಾಡುವವರಿಂದಾಗಿದೆ. ಮಸ್‌ಜಿದ್ ನಿರ್ಮಾಣದ ಬಗ್ಗೆ ಅಲ್ಲಾಹನ ಆಜ್ಞೆ ಏನೆಂದರೆ ತಖ್ವದಿಂದ ಅದನ್ನು ನಿರ್ಮಿಸಬೇಕು ಎಂದಾಗಿದೆ.

ಆದುದರಿಂದ ನಾವು ಅಲ್ಲಾಹನಿಗೋಸ್ಕರ ಕೆಲಸ ಮಾಡಿದ ನಂತರ ನಾವು ಚಿಂತಿಸಬೇಕಾದುದೇನೆಂದರೆ ನಾವು ಒಂದು ಉದ್ದೇಶದಲ್ಲಿ ಜಯಗಳಿಸಿದ ನಂತರ ನಾವು ನಮ್ಮ ಜೀವಿತದ ಮುಖ್ಯ ಉದ್ದೇಶವನ್ನು ನಿರ್ಲಕ್ಷಿಸಬಾರದು. ನಾವು ಒಂದು ಸುಂದರ ಮಸ್‌ಜಿದ್ ನಿರ್ಮಿಸಿ ನಮ್ಮ ಕಡ್ಡಾಯ ಕರ್ತವ್ಯ ಈಡೇರಿಸಿದೆವು, ಎಲ್ಲ ಕೆಲಸ ಕೊನೆಗೊಂಡಿದೆ ಎಂದು ಯೋಚಿಸಬಾರದು. ಈ ಮಸ್‌ಜಿದ್ ನಿರ್ಮಾಣದ ನಂತರ ಈಗ ನಮ್ಮ ಮುಖ್ಯ ಕೆಲಸ ಪ್ರಾರಂಭವಾಗಿದೆ. ನಾವು ಅದರಲ್ಲಿ ಆರಾಧನೆಯ ಹಕ್ಕನ್ನು ನಿಭಾಯಿಸಬೇಕೆಂದು ನೆನಪಿನಲ್ಲಿಡಬೇಕು. ಆರಾಧನೆಯ ಕರ್ತವ್ಯ ಈಡೇರಿಸುವುದು ಮಸ್‌ಜಿದನ್ನು ಜನನಿಬಿಡವನ್ನಾಗಿ ಮಾಡುವಾಗ ಆಗಿರುತ್ತದೆ. ಒಂದು ಹದೀಸಿನಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿರುವರು: ಮಸ್‌ಜಿದ್‌ಗೆ ಬೆಳಿಗ್ಗೆ ಮತ್ತು ಸಾಯಂಕಾಲ ಹೋಗುವವನಿಗೆ ಅಲ್ಲಾಹನು ಸ್ವರ್ಗದಲ್ಲಿ ತನ್ನ ಸತ್ಕಾರದ ವ್ಯವಸ್ಥೆ ಮಾಡುವನು ಎಂದು. ಆದುದರಿಂದ ಮಸ್‌ಜಿದ್‌ಗೆ ಹೋಗುವವರು ಅಲ್ಲಾಹನ ಅತಿಥಿಯಾಗಿ ಹೋಗುತ್ತಾರೆ. ಈ ಮಸ್‌ಜಿದನ್ನು ನಿರ್ಮಿಸಿದ ಬಗ್ಗೆ ಕೃತಜ್ಞತೆಯನ್ನೂ ಪರಸ್ಪರ ಪ್ರೀತಿಯನ್ನೂ ಹಿಂದೆಗಿಂತಲೂ ಹೆಚ್ಚಿನ ರೀತಿಯಲ್ಲಿ ಪ್ರಕಟಿಸುವ ಮೂಲಕ ಮಾಡಬೇಕು. ಇಲ್ಲಿ ವಾಸಿಸುವ ನೀವೆಲ್ಲರೂ ಈ ಕೃತಜ್ಞತೆ ಪ್ರಕಟಿಸಬೇಕು ಮತ್ತು ಲೋಕದ ಎಲ್ಲ ಸ್ಥಳಗಳಲ್ಲಿ ಇರುವ ಅಹ್ಮದಿಯರೂ ಈ ರೀತಿ ಕೃತಜ್ಞತೆ ಅರ್ಪಿಸಬೇಕು. ನೀವು ಮಸ್‌ಜಿದ್‌ಗೆ ಹೋಗುವಾಗ ಮಸ್‌ಜಿದ್‌ಗೆ ಸಂಬಂಧಿಸಿದ ನಿಮ್ಮ ಈ ಹೊಣೆಗಾರಿಕೆಗಳನ್ನು ಸಹ ಈಡೇರಿಸಿರಿ. ಅಂದರೆ ಈ ಮಸ್‌ಜಿದ್ ನಿರ್ಮಿಸಿದ ನಂತರ ನೀವು ಹಿಂದೆಗಿಂತಲೂ ಹೆಚ್ಚಿನ ಮಟ್ಟದಲ್ಲಿ ಇಸ್ಲಾಮಿನ ಉಪದೇಶಗಳನ್ನು ಜನರಿಗೆ ತೋರಿಸಲು ಮತ್ತು ತಿಳಿಸಲು ಪ್ರಯತ್ನಿಸಬೇಕು.

ಮಸ್‌ಜಿದ್ ನಿರ್ಮಾಣದ ಉದ್ದೇಶ ಅಲ್ಲಾಹನ ಬಗ್ಗೆ ವಿಶ್ವಾಸ ಪ್ರಕಟಣೆಯಾಗಿದೆ. ಮನುಷ್ಯನು ಪ್ರತಿಯೊಂದು ರೀತಿಯ ಶಿರ್ಕ್‌ನಿಂದ ತನ್ನನ್ನು ರಕ್ಷಿಸುವಾಗ ಇದು ಸಾಧ್ಯವಾಗುತ್ತದೆ. ಪ್ರತಿಯೊಂದು ವಸ್ತುವನ್ನು ಕೊಡುವವನು ಅಲ್ಲಾಹನೆಂದು ಮನವರಿಕೆ ಮಾಡಬೇಕು. ಇನ್ನೊಂದು ಪರಲೋಕದ ಬಗ್ಗೆ ವಿಶ್ವಾಸವಾಗಿದೆ. ಅದರ ವಿಸ್ತಾರವಾದ ವಿವರಗಳಿವೆ. ಪರಲೋಕ ಜೀವಿತ ಇಹಲೋಕಕ್ಕಿಂತ ಉತ್ತಮವೆಂದು ಅಲ್ಲಾಹನು ಹೇಳಿದ್ದಾನೆ. ಮನುಷ್ಯನು ಅಷ್ಟು ಮಾತ್ರ ಯೋಚಿಸುವುದಾದರೆ, ಲೋಕದ ಸಾಮಾನ್ಯ ವಸ್ತುಗಳನ್ನು ಗಳಿಸಲು ತನ್ನ ಶಕ್ತಿಗಳೆನ್ನೆಲ್ಲಾ ಬಳಸುವುದಕ್ಕೆ ಬದಲಾಗಿ ತನ್ನನ್ನು ಪರಲೋಕದ ಅನುಗ್ರಹಗಳ ವಾರೀಸುದಾರನಾಗಲು ಪ್ರಯತ್ನಿಸುತ್ತಿದ್ದನು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದ್ದಾನೆ: وَلَدَارُ الآخِرَةِ خَيْرٌ لِّلَّذِينَ اتَّقَوْ ಭಯಭಕ್ತಿಯುಳ್ಳವರಿಗೆ ಪರಲೋಕ ಜೀವನ ಗುಣಕರವಾಗಿದೆ. (12:110).

ಮಸ್‌ಜಿದನ್ನು ನಿರ್ಮಿಸಿ ಒಂದು ಮನೆಯನ್ನು ಸತ್ಯವಿಶ್ವಾಸಿ ಸ್ವರ್ಗದಲ್ಲಿ ನಿರ್ಮಿಸುತ್ತಾನೆ. ಆದರೆ ಮಸ್‌ಜಿದ್ ಜನನಿಬಿಡವಾಗಲು ತಖ್ವದ ಆವಶ್ಯಕತೆ ಇದೆ. ಮಸ್‌ಜಿದ್ ನಿರ್ಮಾಣದ ಹೊಣೆಗಾರಿಕೆ ಈಡೇರುವುದು ತಖ್ವದ ಮೂಲಕವಾಗಿದೆ. ತಖ್ವದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತಖ್ವವನ್ನು ಹೊಂದಿದ ಮುತ್ತಖಿಯಾಗಲು ಮನುಷ್ಯನು ದೊಡ್ಡ ಪಾಪಗಳಿಂದ ಮುಕ್ತನಾಗಿರಬೇಕಲ್ಲದೆ, ಅಂದರೆ ವ್ಯಭಿಚಾರ, ಕಳ್ಳತನ, ಅನ್ಯರ ಹಕ್ಕುಗಳ ಕಸಿಯುವಿಕೆ, ಅನ್ಯರ ಬಗ್ಗೆ ಹೀನ ಭಾವನೆ, ಜಿಪುಣತನ ಮೊದಲಾದ ದುರ್ಗುಣಗಳನ್ನು ತ್ಯಜಿಸಬೇಕಲ್ಲದೆ ಸದ್ಗುಣಗಳನ್ನು ವೃದ್ಧಿಸಬೇಕು. ದುರ್ಗುಣಗಳನ್ನು ಬಿಡಬೇಕು ಸದ್ಗುಣಗಳನ್ನು ಹೊಂದಬೇಕು ಮತ್ತು ಅವುಗಳನ್ನು ವೃದ್ಧಿಸಬೇಕು. ಅದೇ ರೀತಿ, ಜನರೊಂದಿಗೆ ಮೃದುವಾಗಿ ವರ್ತಿಸಬೇಕು. ಉತ್ತಮ ಸ್ವಭಾವ ಗುಣಗಳಿಂದಲೂ ಸಹಾನುಭೂತಿಯಿಂದಲೂ ಜನರೊಂದಿಗೆ ವರ್ತಿಸಬೇಕು. ಜನರೊಂದಿಗೆ ಪ್ರೀತಿಯಿಂದ ವರ್ತಿಸುವುದು ಸಹ ತಖ್ವವಾಗಿದೆ. ಮುಸ್ಲಿಮರೊಂದಿಗೆ

ಮತ್ತು ಮುಸ್ಲಿಮೇತರರೊಂದಿಗೆ, ಸ್ವಂತದವರೊಂದಿಗೆ ಮತ್ತು ಅನ್ಯರೊಂದಿಗೆ ಸಹಾನುಭೂತಿಯಿಂದ ವರ್ತಿಸಬೇಕು. ಅಲ್ಲಾಹನೊಂದಿಗೆ ಸತ್ಯವಾದ ನಿಷ್ಠೆ ಮತ್ತು ಸತ್ಯ ಸಂಧತೆ ತೋರಿಸಬೇಕು. ಸೇವೆ ಎಂಬ ಸ್ತುತ್ಯರ್ಹ ಸ್ಥಾನವನ್ನು ಹುಡುಕಿರಿ. ಅಲ್ಲಾಹನು ಮೆಚ್ಚುವಂತಹ ಕೆಲಸ ಕಾರ್ಯಗಳನ್ನು ಮಾಡಿರಿ.

ಇವುಗಳನ್ನು ಮಾಡುವವನೇ ಮುತ್ತಖೀ ಆಗಿದ್ದಾನೆ. ನಾನು ಹಿಂದೆ ಹೇಳಿದ ಹಾಗೆ ನಿಮ್ಮ ಹೊಣೆಗಾರಿಕೆಗಳು ವರ್ಧಿಸಿವೆ. ಮಸ್‌ಜಿದ್‌ಗೆ ಸಂಬಂಧಿಸಿದ ನಮ್ಮ ಹೊಣೆಗಾರಿಕೆ ಈಡೇರಿಸಲು ನಾವು ದೊಡ್ಡ ಕ್ರಾಂತಿಯನ್ನು ನಮ್ಮಲ್ಲಿ ಉಂಟುಮಾಡಬೇಕು. ಅದೇ ರೀತಿ ನಮಾಝುನ್ನು ಸಂಸ್ಥಾಪಿಸುವ ಕುರಿತು ನಿರ್ದೇಶಿಸಲಾಗಿದೆ. ನಮಾಝಿನ ಸಂಸ್ಥಾಪನೆಯೆಂದರೆ ಐದು ಹೊತ್ತು ಸಾಮೂಹಿಕ ನಮಾಝ್ ಅನುಷ್ಠಿಸುವುದಾಗಿದೆ. ಈ ಮಸ್‌ಜಿದ್‌ನ ಸೌಂದರ್ಯ ನಮಾಝ್ ಮಾಡುವವರ ಸಂಖ್ಯೆಯಲ್ಲಿದೆ. ಅವರು ನಿಷ್ಠಾವಂತರಾಗಿ ನಮಾಝ್ ಅನುಷ್ಠಿಸುವವರೂ ಅನುಷ್ಠಿಸುವ ಇಚ್ಛೆ ಹೊಂದಿರುವವರೂ ಆಗಿರುತ್ತಾರೆ. ಅದೇ ರೀತಿ ಝಕಾತ್ ಬಗ್ಗೆ ಸಹ ಶ್ರದ್ಧೆ ನೀಡಬೇಕು. ಬಡವರ ಹಕ್ಕುಗಳ ಬಗ್ಗೆ ಶ್ರದ್ಧೆ ನೀಡಬೇಕು. ಅಲ್ಲಾಹನು ಅನೇಕ ಸ್ಥಳಗಳಲ್ಲಿ ಝಕಾತ್ ಬಗ್ಗೆ ಉಪದೇಶಿಸಿದ್ದಾನೆ. ಧನವನ್ನು ಖರ್ಚು ಮಾಡುವ ಬಗ್ಗೆ ಅಲ್ಲಾಹನು ಹೇಳಿರುವನಲ್ಲದೆ ಝಕಾತ್ ಬಗ್ಗೆ ವಿಶಿಷ್ಟವಾಗಿ ಹೇಳಿದ್ದಾನೆ. ಖಿಲಾಫತ್ ವ್ಯವಸ್ಥೆಯೊಂದಿಗೆ ಝಕಾತ್‌ಗೆ ಬಹಳ ಗಾಢವಾದ ಸಂಬಂಧವಿದೆ. ಆಯತೆ ಇಸ್ತಿಖ್‌ಲಾಫ್‌ನಲ್ಲಿ ಖಿಲಾಫತ್ ವ್ಯವಸ್ಥೆ ಬಗ್ಗೆ ಮಾರ್ಗದರ್ಶನ ಮತ್ತು ಭವಿಷ್ಯವಾಣಿ ಹೇಳಿದ ನಂತರ ಮುಂದಿನ ವಚನದಲ್ಲಿ ನಮಾಝ್ ನೆಲೆ ನಿಲ್ಲಿಸುವ ಬಗ್ಗೆ ಮತ್ತು ಝಕಾತ್ ಕೊಡುವ ಬಗ್ಗೆ ಗಮನ ಹರಿಸಲಾಗಿದೆ. ಇಂದು ಧರ್ಮಕ್ಕೆ ಸ್ಥಿರತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ದೊರಕಬೇಕಾಗಿದೆ. ಏಕೆಂದರೆ ಅವರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧ ಗುಲಾಮನಾಗಿ ಲೋಕಕ್ಕೆ ಆಗಮಿಸಿದರು. ಲೋಕದಲ್ಲಿ ಇಸ್ಲಾಮೀ ಉಪದೇಶಗಳ ವಾಸ್ತವಿಕ ಉದಾಹರಣೆ ಸ್ಥಾಪಿಸಲಿಕ್ಕಾಗಿಯೇ ಅಲ್ಲಾಹನು ಅವರನ್ನು ಕಳುಹಿಸಿರುವನು. ಇಸ್ಲಾಮಿಗೆ ನಷ್ಟವಾದ ಘನತೆ ಅದಕ್ಕೆ ದೊರಕಿಸಿ ಕೊಡಲಿಕ್ಕಾಗಿ. ಅವರು ಖಾತಮುಲ್ ಖುಲಫಾ ಸಹ ಆಗಿದ್ದರು. ಇಸ್ಲಾಮಿನ ಸೌಂದರ್ಯ ಏನೆಂದು ಅವರು ಲೋಕಕ್ಕೆ ತಿಳಿಸಿಕೊಟ್ಟರು. ಅವರು ಆಗಮಿಸಿದ ಉದ್ದೇಶ ಲೋಕವು ಇಸ್ಲಾಮಿನ ಸೌಂದರ್ಯ ಕಾಣುವಂತಾಗಲಿ ಎಂಬುದಾಗಿದೆ.

ನಾನು ಓದಿದ ಸೂರತುಲ್ ಹಜ್‌ನ ವಚನದಲ್ಲಿ ಅಲ್ಲಾಹನು ಹೇಳಿರುವುದೇನೆಂದರೆ ಅಂತಹ ಜನರು ನಮಾಝುನ್ನು ನಿಷ್ಠೆಯಿಂದ ನಿರ್ವಹಿಸುತ್ತಾರೆ ಮತ್ತು ಝಕಾತ್ ಕೊಡುತ್ತಾರೆ ಎಂದು ಹೇಳಿರುವನು. ಒಳ್ಳೆಯ ವಿಷಯಗಳನ್ನು ಪ್ರಚಾರ ಮಾಡುವುದು ಮತ್ತು ಕೆಡುಕನ್ನು ತಡೆಯುವುದು ಸಹ ಅವರ ಕೆಲಸವಾಗಿದೆ. ಖಿಲಾಫತ್ ವ್ಯವಸ್ಥೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕವೇ ಈ ಕಾಲಘಟ್ಟದಲ್ಲಿ ಜಾರಿಗೊಳ್ಳಲಿಕ್ಕಿತ್ತು ಮತ್ತು ಅದು ಜಾರಿಗೊಂಡಿತು. ಇಂದಿನ ಕಾಲದಲ್ಲಿ ಅಹ್ಮದಿಯಾ ಜಮಾಅತಿನಲ್ಲಿ ಮಾತ್ರ ಖಿಲಾಫತ್ ವ್ಯವಸ್ಥೆ ಸ್ಥಾಪಿತವಾಗಿದೆ. ಅದು ನೈಜ ಇಸ್ಲಾಮೀ ತತ್ವಗಳನ್ನು ಪ್ರಚಾರ ಮಾಡುತ್ತಿದೆ ಮತ್ತು ಹಬ್ಬಿಸುತ್ತದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿಗೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ಇದರ ಬಗ್ಗೆ ಯೋಚಿಸಬೇಕು ಮತ್ತು ತನ್ನ ಉದ್ದೇಶ ಲಕ್ಷ್ಯ ಮನವರಿಕೆ ಮಾಡಬೇಕು. ಇದಕ್ಕೋಸ್ಕರ ನಮ್ಮ ಬೈಅತ್ ಪ್ರತಿಜ್ಞೆಗಳನ್ನು ಈಡೇರಿಸಿಕೊಂಡು ತಮ್ಮ ಯೋಚನೆಗಳನ್ನು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿ ಮಾಡಲು ಪ್ರತಿ ಸಮಯದಲ್ಲಿ ಪ್ರಯತ್ನಿಸುತ್ತಾ ಇರಬೇಕು.

ನಾವು ಈ ವಿಷಯಗಳನ್ನು ಮನವರಿಕೆ ಮಾಡುವಂತೆ ಅಲ್ಲಾಹನು ಮಾಡಲಿ. ನಾವು ಅಲ್ಲಾಹನಿಗೆ ಸಂಬಂಧಿಸಿದ ನಮ್ಮ ಹೊಣೆಗಾರಿಕೆಗಳನ್ನು ಈಡೇರಿಸುವವರಾಗೋಣ. ನಾವು ಪರಸ್ಪರ ಪ್ರೀತಿ ವರ್ಧಿಸುವವರಾಗೋಣ. ಮಸ್‌ಜಿದ್‌ಗೆ ಸಂಬಂಧಿಸಿದ ಹೊಣೆಗಾರಿಕೆ ಈಡೇರಿಸುವವರಾಗೋಣ. ತಬ್ಲೀಗ್ ಸಂಬಂಧವಾದ ನಮ್ಮ ಹೊಣೆಗಾರಿಕೆಗಳನ್ನು ಸಹ ನಿರ್ವಹಿಸುವವರಾಗೋಣ. ನಾವು ಸಾಂದರ್ಭಿಕವಾಗಿ ಮಾತ್ರ ಸಾಂಪತ್ತಿಕ ತ್ಯಾಗ ಮಾಡುವವರಾಗದೆ ನಾವು ಆಧ್ಯಾತ್ಮಿಕ ಅಭಿವೃದ್ಧಿಯ ಸ್ಥಿರ ಉತ್ಸಾಹ ನಮ್ಮಲ್ಲಿ ಉಂಟುಮಾಡುವವರಾಗೋಣ ಮತ್ತು ಜಾರಿಗೊಳಿಸುವವರಾಗೋಣ. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಪ್ರೇಮಿಯೊಂದಿಗೆ ಮಾಡಿದ ಬೈಅತ್ ಪ್ರತಿಜ್ಞೆ ಈಡೇರಿಸುವವರಾಗೋಣ. ಅಲ್ಲಾಹನು ಪ್ರತಿಯೊಬ್ಬರಿಗೆ ಈ ಭಾಗ್ಯ ದಯಪಾಲಿಸುವವನಾಗಲಿ – ಆಮೀನ್.

——————*****——————


***Friday Sermon delivered by Hadrath Khaleefatul Masih Al Khamis*** *(atba)*

*at Masjid Mahmood,Sweden on 13-05-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon